**ಸಾಕ್ಷಿಯನ್ನು ದಿಃ 04.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 1 ಎಂದು,
ದೂರಿನ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 2 ಎಂದು,
ಸ್ಥಳ ಪಂಚನಾಮೆಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 3 ಎಂದು,
ಕಚ್ಚಾ ನಕ್ಷೆಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 4 ಎಂದು,
ಐಎಂವಿ ವರದಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 5 ಎಂದು,
ಗಾಯದ ಪ್ರಮಾಣ ಪತ್ರದ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 6 ಎಂದು,
ಅಂತಿಮ ದೋಷಾರೋಪಣಾ ಪಟ್ಟಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಪಿ. 7 ಎಂದು,
14 ಔಷಧಿ ಪಾವತಿ ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ. 8 ಎಂದು,
12 ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ. 9 ಎಂದು,
3 ಎಕ್ಸರೇ ಫೀಲಂಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 10 ಎಂದು,
ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆ ಹಾಜರುಪಡಿಸಿದ್ದು, ಅದನ್ನು ನಿಪಿ. 11 ಎಂದು,
ಪಾನ್ ಕಾರ್ಡ್ನ ನೋಟರೀಕೃತ ದಾಖಲೆ ಹಾಜರುಪಡಿಸಿದ್ದು ನಿಪಿ. 12 ಎಂದು,
ಎರಡು ಡಿ.ಎಲ್ ನ ನೋಟರಿಕೃತ ದಾಖಲೆ ಹಾಜರು ಪಡಿಸಿದ್ದು ಅದನ್ನು ನಿಪಿ. 13 ಎಂದು,
ಆರ್.ಸಿ. ಕಾರ್ಡ್ನ ನೋಟರಿಕೃತ ದಾಖಲೆ ಹಾಜರುಪಡಿಸಿದ್ದು ಅದನ್ನು ನಿಪಿ. 14 ಎಂದು,
20 ಔಷಧಿ ಪಾವತಿ ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ. 15 ಎಂದು,
ಪೋಲೀಸ್ ಇಂಟೀಮೇಷನ್ ಗಳ ನೋಟರಿಕೃತ ದಾಖಲೆ ಹಾಜರು ಪಡಿಸಿದ್ದು ಅದನ್ನು ನಿಪಿ. 16 ಎಂದು,

ಸ್ಪಂದನಾ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 17 ಎಂದು, ಮೃತ ಕೆ. ಪ್ರಸಾದ್ ರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ. 18 ಎಂದು, 1 ಮತ್ತು 2 ನೇ ಅರ್ಜಿದಾರರ ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆ ಹಾಜರು ಪಡಿಸಿದ್ದು ಒಟ್ಟಾಗಿ ನಿಪಿ. 19 ಎಂದು ಗುರುತಿಸಲಾಯಿತು.

(ನಿಪಿ. 18 ಮತ್ತು ನಿಪಿ. 19 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ನೀಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.